ಕಲ್ಲು ಇರುವುದರಿಂದ ವೇಗವು ಕಡಿಮೆ. ಮಣ್ಣು ಹೆದರಿಸಿತು, ಈಗ ಕಲ್ಲು ಹೆದರಿಸುತ್ತಿದೆ. ಜಲಶಿಲ್ಪಿ 72 ಪೂಟಿಗೆ ನೀರು ದೊರೆವುದೆಂದು ಹೇಳಿದ್ದಾರೆ. ಇಂದು ನೋಡಿದೆನು.70 ಅಡಿ ಆಗಿದೆ. ಇನ್ನೂ ನೀರಿನ ಲಕ್ಷಣವಿಲ್ಲ. ಇನ್ನು ಆರೆಂಟು ಅಡಿಗಳಲ್ಲಾದರೂ ನೀರು ದೊರೆಯಬಹುದೆ? ಶ್ರೀಹರಿ, ಜಲಶಿಲ್ಪಿಯ ಮಾತು ಅರ್ಧ ಸತ್ಯವಾಗಿದೆ; ಉಳಿದರ್ಧವು ನಿನ್ನ ಕೃಪೆಯಿಂದ ಸತ್ಯವಾಗಲಿ. ಇದೇ ಈಗ ಗೋಠೆ ಕೇಶವರಾಯರನ್ನು ಕರೆಯಿಸಿದ್ದೆ. ಮಾಘ ಮಾಸವು ಬರುವುದರೊಳಗೆ ಮನೆಯನ್ನು ನಿಶ್ಚಯಪೂರ್ವಕವಾಗಿ ಕಟ್ಟಿಸಿ ಕೊಡುವೆನೆಂದು ಹೇಳಿದರು.

ಗೃಹಕಲಹವು ಎಷ್ಟೊಂದು ಮನೋವ್ಯಥೆಗೆ ಕಾರಣವಾಗುವುದು. ---ರು ಎಷ್ಟು ಶ್ರೀಮಂತರು! ಆದರೆ ಗೃಹಕಲಹವು ಅವರ ಶಾಂತಿಯನ್ನೆ ಕಳೆದಿದೆ. ಇಂದು ಅವರ ಹಿರಿಯಮಗನು ಬೇರೆಯಾಗಿ ಬೇರೆಡೆಗೆ ಇರಲು ಹೋದನು. ಅವರ ಕಣ್ಣಲ್ಲಿ ಒಂದೇಸವನೆ ನೀರು! ಹೃದಯನೈರ್ಮಲ್ಯವಿದ್ದರೆ ಗೃಹಕಲಹಕ್ಕೆ ಆಸ್ಪದವಿಲ್ಲ. ಅದು ಇಲ್ಲದುದರಿಂದಲೆ ಈ ದುಃಸ್ಥಿತಿ! ನರನೆ ಸ್ವಾರ್ಥವನ್ನು ಮರೆ. ಉದಾರನಾಗಿರು. ಪವಿತ್ರ ಭಾವನೆಗಳು ನಿನ್ನ ಅಂತಃಕರಣದಲ್ಲಿ ನೆಲೆಗೊಳ್ಳಲಿ. ಶ್ರೀಹರಿಯ ಪ್ರೇಮಕ್ಕೆ ಪಾತ್ರನಾಗು.

**19-11-41 ರಾತ್ರಿ 8.20**

ಶ್ರೀಃ

**ಎನಿತೀ ಸವಿಯೋ! ಎನಿತೀ ಸವಿಯೋ!**
**ಅನಿತಿನಿತೆನಲಾಗದ ಸವಿಯೋ! ||ಪಲ್ಲವಿ||**
**ಬಿರಿವೂಗಳು ಮನವೊಲಿದೆಳಗಾಳಿಗೆ |**
**ಪರಿಮಳವುಣಿಸುತೆ ಕುಣಿಕುಣಿಯುತಿವೆ ||**
**ಕರೆಯುತೆ ಕಿವಿಗಿಂಪನು ನಲ್ದೆರೆಗಳು**
**ಸರಸದಿ ಕೊಳದಲಿ ಕೆಲೆದಾಡುತಿವೆ ||1||**
**ಚೆಲುವನು ನೋಡಿದನಿಂಪನು ಸವಿದನು |**
**ನಲಿದನು ಕವಿ ನಸುನಗೆ ಮಿನುಮಿನುಗೆ ||**
**ಒಲವಿನೊರತೆಯುಕ್ಕಿತು ಹೊನಲಾಯಿತು |**
**ಚೆಲುವ ಚೆಲುವ ಹಾಡೊದವಿದುದಿಳೆಗೆ ||2||**
**ಬಿರಿವೂಗಳ ಸವಿ ಮೆಲ್ಗಾಳಿಯ ಸವಿ |**
**ನರುಗಂಪಿನ ಸವಿ ತೆರೆಯುಲಿಯ ಸವಿ ||**
**ಬೆರೆತು ಕವಿಯ ಬಗೆಯೊಳ್ವಿನ ಸವಿಯಲಿ |**
**ಹರಿವುದು ಹಾಡಿನೊಳೀಯೆಲ್ಲ ಸವಿ ||3||**

ನಿನ್ನೆ ಪ್ರಕೃತಿ ಸರಿಯಾಗಿರಲಿಲ್ಲ. ಅಶಕ್ತತೆ ಬಹಳ. ಮೊನ್ನೆ ರಾತ್ರಿ ನಿದ್ದೆ ಇರಲಿಲ್ಲ. ನಿನ್ನೆ ರಾತ್ರಿ ಹರಪನಹಳ್ಳಿ ಕಾಲಿಗೆ ಔಡಲೆಣ್ಣೆಯನ್ನು ಹೂಸಿ ತಿಕ್ಕಿದನು. ಸ್ವಲ್ಪ ಆರಾಮವೆನಿಸಿತು.

ಇಂದು ಬೆಳಗಿನಲ್ಲಿ ಶಾಲೆ. ಹುಡುಗರ ವ್ಯಾಯಾಮ ಪ್ರದರ್ಶನ ಹೈಸ್ಕೂಲಿನ ಬಯಲಲ್ಲಿ.

ಮನೆಯ ಕೆಲಸವು ಪ್ರಾರಂಭವಾಗಿದೆ. ನಿನ್ನೆ ಶ್ರೀ ನಾಯಿಕ ಮತ್ತು ಹೋಳಿಕಟ್ಟಿ ಗೋಠೆ ಕೇಶವರಾಯರಿಗೆ ಸ್ಪಷ್ಟವಾಗಿ ಮಾತಾಡಿದರು. ಗೋಠೆಯವರು ಇದರಿಂದ ಎಚ್ಚತ್ತಂತೆ ಕಾಣುತ್ತದೆ. ರಾತ್ರಿ ಬಂದು ಮಾಘಮಾಸದೊಳಗಾಗಿ ಕೆಲಸವನ್ನು ಮುಗಿಸುವುದಾಗದಿದ್ದರೂ ಮೊದಲ ಮನೆಯನ್ನು ಮುಗಿಸಿಕೊಡುವೆನೆಂದು ವಚನವಿತ್ತರು. ಅಟ್ಟದ ಮನೆಯ ಗಿಲಾವಿ ಉಳಿಯಬಹುದೆಂದು ಹೇಳಿದರು.

ಇಂದು ಶಿರಗುಪ್ಪಿ ಕೃಷ್ಣನಿಗೋಸುಗ ಮೊಕಾಶಿಯವರ ಹುಡಿಗೆಯನ್ನು ನೋಡಿ ಬಂದೆವು.

**20-11-41 ರಾತ್ರಿ 9.10**

ಬಾವಿಯ ಮತ್ತು ಮನೆಯ ಕೆಲಸವು ಸಾಗಿದೆ. ನೀರಿನ ಲಕ್ಷಣವು ಹೆಚ್ಚು ಸ್ಪಷ್ಟವಾಗುತ್ತಿದೆ. ಆದರೆ ಇನ್ನೂ ನಿಶ್ಚಯವೆನಿಸಲೊಲ್ಲದು. ಹೌದನ್ನು ಮುಗಿಸಿದರು. ಮನೆಯ ಬಾಗಿಲುಗಳ ನಡುವಿನ ಭಾಗಗಳನ್ನು ತುಂಬಿ ಕೊಳ್ಳುತ್ತಿರುವರು.

ಆ ಹೋರಿ ಮಾಡುವ ಕೆಲಸವು ಅದ್ಭುತವು! ಹೆಸರನ್ನು ಹೇಳಿ ಆ ಹೆಸರಿನವರನ್ನು ತೋರಿಸೆಂದರೆ ಅನಾಯಾಸವಾಗಿ ತೋರಿಸಿಬಿಡುತ್ತದೆ. ಇಂತಹ ಬೇರೆ ಕೆಲಸಗಳನ್ನೂ ಮಾಡುತ್ತದೆ. ಸೃಷ್ಟಿಯಚ್ಚರಿಯಾಗರಂ!

ಇಲ್ಲಿಯ ಕೆಲವು ಲಿಂಗವಂತ ವಿದ್ಯಾರ್ಥಿಗಳು ನಾನು ತಮ್ಮ ಧರ್ಮದ ವಿಷಯದಲ್ಲಿಯೂ ಕವಿಗಳ ವಿಷಯದಲ್ಲಿಯೂ ಅಸಹಿಷ್ಣುವಾಗಿ ಅಪಮಾನಕಾರಕ ಶಬ್ದಗಳನ್ನು ಆಡಿದೆನೆಂದು ಅಪವಾದವನ್ನು ನನ್ನ ಮೇಲೆ ಹೇರುತ್ತಿರುವರು! ನಾನು ಹೀಗೆ ಮಾಡುವುದು ಶಕ್ಯವೆ? ಪರಧರ್ಮಸಹಿಷ್ಣುತೆ ನನ್ನಲ್ಲಿ ಇಲ್ಲದಿದ್ದರೆ ಯಾರಲ್ಲಿ ಇರಬಲ್ಲದು? ಕವಿಗಳ ಕೃತಿಗಳಲ್ಲಿ ದೋಷಗಳು ಇರುವುದೇ ಇಲ್ಲವೆ? ಜಗತ್ತಿನಲ್ಲಿ ನಿರ್ದೋಷ